# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 10 (07) |
| ವಿಧಾನ ಪರಿಷತ್ ಸದಸ್ಯರ ಹೆಸರು | : | ಡಾ: ತಳವಾರ್ ಸಾಬಣ್ಣ<br>(ನಾಮ ನಿರ್ದೇಶಿತರು) |
| ಉತ್ತರಿಸುವವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |
| ಉತ್ತರಿಸುವ ದಿನಾಂಕ | : | 04.03.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಜಿಲ್ಲೆ ಚಿತ್ತಾಪುರ ಪಟ್ಟಣದ ಹತ್ತಿರವಿರುವ ಶ್ರೀ ಸಿಮೆಂಟ್ ಕಂಪನಿ ಭೂ ಪರಿಹಾರ ವಿತರಣೆಯಲ್ಲಿ ತಾರತಮ್ಯ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ 05.01.2010 ರಂದು ನಡೆದ SHLCC ಸಭೆಯಲ್ಲಿ ಮೆ\|\| ಶ್ರೀ ಸಿಮೆಂಟ್ ಲಿಮಿಟೆಡ್ ಘಟಕಕ್ಕೆ ರೂ. 1000 ಕೋಟಿ ಬಂಡವಾಳ ಹೂಡಿಕೆ ಮಾಡಿ 3 MTPA ಸಿಮೆಂಟ್ ಘಟಕವನ್ನು ಕೊಡ್ಲಾ ಹಾಗೂ ಬೆನಕನಹಳ್ಳಿ, ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ ಇಲ್ಲಿ ಸ್ಥಾಪಿಸಲು ಅನುಮೋದನೆ ನೀಡಿರುತ್ತದೆ.<br><br>ಮೆ\|\| ಶ್ರೀ ಸಿಮೆಂಟ್ ಲಿಮಿಟೆಡ್, ಕಲಬುರಗಿ ಜಿಲ್ಲೆ ರವರು ಅಂದಾಜು 1348.38 ಎಕರೆ ಖಾಸಗಿ ಕೃಷಿ ಭೂಮಿಯನ್ನು ಎಕರೆಗೆ ರೂ.2.35 ಲಕ್ಷದಂತೆ KLR ಕಾಯ್ದೆ Section 109ರಡಿ ಖರೀದಿಸಿರುತ್ತದೆ. |
| ಆ | ಕಂಪನಿಯು 400-500 ರೈತರಿಂದ 1100 ಎಕರೆ ಭೂಮಿ ಸ್ವಾಧೀನ ಪಡಿಸಿಕೊಂಡು ಪ್ರತಿ ಎಕರೆಗೆ ರೂ.11.68 ಲಕ್ಷ ಪರಿಹಾರ ನೀಡುವ ಬದಲಿಗೆ ಕಂಪನಿ ರೈತರಿಗೆ ರೂ.8.68 ಲಕ್ಷ ಪ್ರತಿ ಎಕರೆಗೆ ಪರಿಹಾರ ನೀಡಿರುವುದು ಸರಿಯೇ; | ನಂತರ, ರೈತರು ಹೆಚ್ಚಿನ ಭೂ ಪರಿಹಾರ ಕೋರಿದ್ದರಿಂದ, ಈ ವಿಷಯವಾಗಿ ರೈತರೊಂದಿಗೆ ಚರ್ಚಿಸಿ, ಪ್ರತಿ ಎಕರೆಗೆ ರೂ.3.65 ಲಕ್ಷ ಹೆಚ್ಚುವರಿ ಪರಿಹಾರವಾಗಿ ಪಾವತಿಸಲಾಗಿರುತ್ತದೆ.<br><br>ತದನಂತರ, ಮೆ\|\| ಶ್ರೀ ಸಿಮೆಂಟ್ ಲಿಮಿಟೆಡ್ ಯೋಜನೆಯ ಅನುಷ್ಠಾನದ ಸಮಯದಲ್ಲಿ, ರೈತರು ಮತ್ತೆ ಹೆಚ್ಚುವರಿ ಭೂ ಪರಿಹಾರ ಬೇಡಿಕೆ ಕೋರಿದ್ದರಿಂದ, ಕಂಪನಿಯು ಮಾನವೀಯ ನೆಲೆಯಲ್ಲಿ ಪರಿಗಣಿಸಿ ಮತ್ತು ಆ ಪ್ರದೇಶದಲ್ಲಿ ಶಾಂತಿ ಕಾಪಾಡಲು ಜಿಲ್ಲಾಧಿಕಾರಿಗಳು, ಗುಲ್ಬರ್ಗಾರವರ ಉಪಸ್ಥಿತಿಯಲ್ಲಿ ಹೆಚ್ಚುವರಿ ಪರಿಹಾರವನ್ನು ಪ್ರತಿ ಎಕರೆಗೆ ರೂ.2 ಲಕ್ಷಗಳನ್ನು ನೀಡಿರುತ್ತದೆ.<br><br>ಹೀಗೆ ಒಟ್ಟಾರೆಯಾಗಿ 3 ಕಂತುಗಳಲ್ಲಿ ಪ್ರತಿ ಎಕರೆಗೆ ರೂ.8,00,000/- ಗಳ ಭೂ ಪರಿಹಾರವನ್ನು ನೀಡಿರುವುದಾಗಿ ಘಟಕದವರು ತಿಳಿಸಿರುತ್ತಾರೆ. |
| ಇ | ಬಾಕಿ ಭೂ ಪರಿಹಾರ, ಸಿಮೆಂಟ್ ಧೂಳಿನಿಂದ ಬೆಳೆಹಾನಿಗೆ ಪರಿಹಾರ ಮತ್ತು ಭೂಮಿ ಕಳೆದುಕೊಂಡವರಿಗೆ ಉದ್ಯೋಗ ನೀಡಬೇಕೆಂಬ ರೈತರ ಬೇಡಿಕೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; | ರೈತರಿಗೆ ಹೆಚ್ಚುವರಿ ಭೂ ಪರಿಹಾರವನ್ನು ಈಗಾಗಲೇ ಪಾವತಿಸಲಾಗಿರುತ್ತದೆ ಮತ್ತು ಕಂಪನಿಯು ಭೂಮಿಯನ್ನು ಖರೀದಿಸಿರುವುದರಿಂದ ಆ ಭೂಮಿಗಳ ಬೆಳೆ ಪರಿಹಾರ ಅನ್ವಯಿಸುವುದಿಲ್ಲ. |
| ಈ | ಕಂಪನಿ ನಿಯಮಗಳನ್ನು ಗಾಳಿಗೆ ತೂರಿ ರೈತರೊಂದಿಗೆ ಚೆಲ್ಲಾಟವಾಡುತ್ತಿರುವ ಶ್ರೀ ಸಿಮೆಂಟ್ ಕಂಪನಿಯ ವಿರುದ್ಧ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳುವುದೇ? | ರೈತರ ಮತ್ತು ಕಂಪನಿಯ ನಡುವಿನ ಒಪ್ಪಂದದ ಪ್ರಕಾರ ಕಂಪನಿಯು 483 ಭೂಸಂತ್ರಸ್ಥರಿಗೆ ಉದ್ಯೋಗ ಒದಗಿಸಬೇಕಾಗಿದ್ದು, ಇಲ್ಲಿಯವರೆಗೆ 338 ಭೂಸಂತ್ರಸ್ಥರಿಗೆ ಉದ್ಯೋಗ ಒದಗಿಸಿರುತ್ತದೆ. ಬಾಕಿ ಉಳಿದ 145 ಭೂಸಂತ್ರಸ್ಥರಿಗೆ ಅರ್ಹತೆ, ವಯಸ್ಸು ಮಾನದಂಡಗಳ ಮೇರೆಗೆ ಉದ್ಯೋಗವನ್ನು ನೀಡಬೇಕಾಗಿರುತ್ತದೆ. |

| | | |
|---|---|---|
| | | ಮುಂದುವರೆದಂತೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕಲಬುರಗಿ ರವರು ಈ ಘಟಕದ ಚಟುವಟಿಕೆಯಿಂದ ಉಂಟಾಗುವ ಧೂಳಿನಿಂದ ಬೆಳೆಗಳ ಹಾನಿ ಕುರಿತು ವರದಿ ನೀಡುವಂತೆ ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ, ಸೇಡಂ ಇವರಿಗೆ ದಿನಾಂಕ 04.02.2025ರಂದು ಪತ್ರ ಬರೆದಿದ್ದು, ವರದಿ ನಿರೀಕ್ಷಣೆಯಲ್ಲಿದೆ.<br><br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಕೃಷಿ ಇಲಾಖೆಯ ವರದಿಗಳು ಬಂದ ನಂತರ ನಿಯಮಾನುಸಾರ ಪರಿಶೀಲಿಸಿ, ಕ್ರಮ ಕೈಗೊಳ್ಳಲಾಗುತ್ತದೆ. |

ಸಿಐ 61 ಎಸ್‌ಪಿಐ 2025

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿ ವರು